**ದಿನಾಂಕ 15.07.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ: ಶ್ರೀ. ಎನ್.ಎಸ್. ವಕೀಲರಿಂದಃ-**

ನಾನು ಎಸ್,ಎಸ್.ಎಲ್.ಸಿ.ಯವರೆಗು ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ದಾಖಲೆಗಳನ್ನು ನೋಡಿದರೆ ಯಾರಿಗೆ ಎಷ್ಟು ಆಸ್ತಿ ಮಾರಾಟ ಮಾಡಿರುತ್ತಾರೆ, ಎಷ್ಟು ಆಸ್ತಿ ಬಾಕಿ ಇರುತ್ತದೆ ಎಂದು ತಿಳಿಯುತ್ತದೆ. ಈ ದಾವೆಯ ದಾವಾ ಆಸ್ತಿಗೆ ಸಂಬಂಧಿಸಿದ 1 ನೇ ಪ್ರತಿವಾದಿಯ ಪಹಣಿಯನ್ನು ನೋಡಿರುತ್ತೇನೆ. 1 ನೇ ಪ್ರತಿವಾದಿಗೆ ಸೇರಿದ 2023 ಮತ್ತು 2024 ನೇ ಸಾಲಿನ ಪಹಣಿಯನ್ನು ನೋಡಿರುತ್ತೇನೆ. ಈಗ 1 ನೇ ಪ್ರತಿವಾದಿಯ ಹೆಸರಿನಲ್ಲಿ ಪಹಣಿಯಲ್ಲಿ 02 ರಿಂದ 03 ಗುಂಟೆ ಮಾತ್ರ ಬಾಕಿ ಇರುತ್ತದೆ. ನಾನು ನನ್ನ ಪ್ರಮಾಣಪತ್ರದಲ್ಲಿ 02 ರಿಂದ 03 ಗುಂಟೆ ಮಾತ್ರ 1 ನೇ ಪ್ರತಿವಾದಿಯ ಹೆಸರಿನಲ್ಲಿ ಇರುತ್ತದೆ ಎಂದು ನಮೂದಿಸಿದ್ದು ಸದರಿ ಅಂಶಗಳನ್ನು ನನಗೆ 1 ನೇ ಪ್ರತಿವಾದಿಯು ತಿಳಿಸಿರುತ್ತಾರೆ. 1 ನೇ ಪ್ರತಿವಾದಿಯ ಹೆಸರಿನಲ್ಲಿ ಇರುವ ಪಹಣಿಯನ್ನು 1 ನೇ ಪ್ರತಿವಾದಿಯು ನನಗೆ ತೋರಿಸಿರುತ್ತಾರೆ. 1 ನೇ ಪ್ರತಿವಾದಿಯು ನನಗೆ ಸುಮಾರು 30 ವರ್ಷಗಳಿಂದ ಪರಿಚಯಸ್ಥರು. 1 ನೇ ಪ್ರತಿವಾದಿಯು ನಮ್ಮ ಮನೆಯ ಮುಂದೆ ಸುಮಾರು 30 ವರ್ಷಗಳಿಂದ ವಾಸವಿರುತ್ತಾರೆ, ನಾನು ಸಹ 30 ವರ್ಷಗಳಿಂದ ಅಲ್ಲಿಯೇ ವಾಸವಿರುತ್ತೇನೆ.

ನನಗೆ ವಾದಿಯು ಪರಿಚಯ ಇರುವುದಿಲ್ಲ, ಆದರೆ 13 ರಿಂದ 14 ವರ್ಷಗಳಿಂದ ಅವರನ್ನು ನೋಡುತ್ತಿರುತ್ತಾರೆ. ವಾದಿ ಏನು ಕೆಲಸ ಮಾಡುತ್ತಿದ್ದರು, ಅವರು ಯಾರು ಎಂದು ನನಗೆ ಮಾಹಿತಿ ಇಲ್ಲ. ಸರ್ವೆ ನಂ.58 ರಲ್ಲಿ ಮೂಲತಃ ಎಷ್ಟು ಎಕರೆ ಜಮೀನು ಇತ್ತು ಮತ್ತು ಯಾರ ಹೆಸರಿನಲ್ಲಿ ಇತ್ತು ಎಂಬ ಪ್ರಶ್ನೆಗೆ ಸಾಕ್ಷಿಯು ಸರ್ವೆ ನಂ58 ರಲ್ಲಿ 01 ಎಕರೆ 02 ಗುಂಟೆ ಸ್ವತ್ತು 1 ನೇ ಪ್ರತಿವಾದಿಯ ಹೆಸರಿನಲ್ಲಿ ಇತ್ತು ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಗೆ ಸರ್ವೆ ನಂ.58 ರ ಸ್ವತ್ತು ಪಿತ್ರಾರ್ಜಿತವಾಗಿ ಬಂದಿರುತ್ತದೆ, ಆದರೆ ಸದರಿ ದಾಖಲಾತಿಗಳನ್ನು ನಾನು ನೋಡಿರುವುದಿಲ್ಲ.

1 ನೇ ಪ್ರತಿವಾದಿಯ ತಂದೆ ಸೋಮಯ್ಯ ಆಗಿರುತ್ತಾರೆ. ಸದರಿ ಸೋಮಯ್ಯನವರಿಗೆ 03 ಜನ ಅಣ್ಣ-ತಮ್ಮಂದಿರು ಇರುತ್ತಾರೆ. ಸೋಮಯ್ಯ ಮತ್ತು ಅವರ ಅಣ್ಣ-ತಮ್ಮಂದಿರು

ಎಷ್ಟೆಷ್ಟು ವಿಭಾಗ ಮಾಡಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯು ಕೃಷ್ಣಮೂರ್ತಿ ಎಂಬುವವರಿಗೆ ಸರ್ವೆ ನಂ.58 ರಲ್ಲಿ 20 ಗುಂಟೆಯನ್ನು ಮಾರಾಟ ಮಾಡಿರುತ್ತಾರೆ. ಸದರಿ 20 ಗುಂಟೆಯ ಚಕ್ಕುಬಂದಿ, ಪೂರ್ವಕ್ಕೆ ಕೃಷ್ಣಮೂರ್ತಿರವರ ತೋಟ, ಪಶ್ಚಿಮಕ್ಕೆ ಬೀರಪ್ಪನವರ ಅಡಿಕೆ ತೋಟ, ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ ಈಶ್ವಪ್ಪನವರಿಗೆ ಕೊಟ್ಟ ಜಾಗವಿರುತ್ತದೆ. ಅದರ ಹಿಂದೆ ಜಗಣ್ಣರವರ ತೋಟ ಇರುತ್ತದೆ.

ನಾನು ಮತ್ತು ಪ್ರತಿವಾದಿ ವಾಸಿಸುವ ಮನೆಯ ಮುಂದೆ ಇರುವ ರಸ್ತೆ ಕಡೂರು-ಮರವಂಜಿ ರಾಜ್ಯ ಹೆದ್ದಾರಿ ಆಗಿರುತ್ತದೆ ಎಂದರೆ ಸರಿ. ಸದರಿ ರಾಜ್ಯ ಹೆದ್ದಾರಿಯನ್ನು ಪ್ರಧಿಕಾರದವರು ವಿಸ್ತರ್ಣೆ ಮಾಡುವಾಗ ನಾನು ಅಲ್ಲಿ ವಾಸವಿರಲಿಲ್ಲ. ಸರ್ವೆ ನಂ.58 ರಲ್ಲಿ ರಾಜ್ಯ ಹೆದ್ದಾರಿಯವರು ಎಷ್ಟು ವಿಸ್ತೀರ್ಣದ ಜಮೀನನ್ನು ರಸ್ತೆಗೆ ವಶಪಡಿಸಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಯಾರ ಜಮೀನುಗಳ್ನು ರಾಜ್ಯ ಹೆದ್ದಾರಿಯ ಪ್ರಾಧಿಕಾರದವರು ವಶಪಡಿಸಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಆ ಬಗ್ಗೆ ದಾಖಲಾತಿಗಳನ್ನು ನಾನು ನೋಡಿರುವುದಿಲ್ಲ.

ವಾದಿಯು ಸ್ವಾಧೀನದಲ್ಲಿರುವ ಸ್ವತ್ತಿನ ಪೂರ್ವಕ್ಕೆ ಕೃಷ್ಣಮೂರ್ತಿಯವರು ತೋಟ ಇರುತ್ತದೆ. ಪಶ್ಚಿಮಕ್ಕೆ ಬೀರಪ್ಪನವರ ಅಡಿಕೆ ತೋಟ, ಉತ್ತರಕ್ಕೆ 1 ನೇ ಪ್ರತಿವಾದಿಯು ಹಾಕಿಕೊಂಡಿರುವ ಕಲ್ಲು ಪೌಂಡೇಷನ್ ಇರುತ್ತದೆ, ದಕ್ಷಿಣಕ್ಕೆ ವಾದಿಯ ತೋಟ ಇರುತ್ತದೆ. ವಾದಿಗೆ ಸೇರಿದ ಸ್ವತ್ತಿನ ಸುತ್ತ ತಂತಿ ಬೇಲಿ ಇರುತ್ತದೆ ಎಂದರೆ ಸರಿ. ವಾದಿಯ ಜಮೀನಿನಲ್ಲಿ ಇರುವ ಗೇಟನಿಗೆ ಹಳೆಯ ವಿದ್ಯುತ್ ಕಂಬಗಳನ್ನು ಅಳವಡಿಸಲಾಗಿರುತ್ತದೆ ಎಂದರೆ ಸರಿ. ಹಳೆ ಕಬ್ಬಿಣದಿಂದ ತಯಾರು ಮಾಡಿದ ಗೇಟಾಗಿರುತ್ತದೆ ಎಂದರೆ ಸರಿ. ಸದರಿ ಗೇಟನ್ನು ವಾದಿಯು ಅಳವಡಿಸಿರುತ್ತಾರೆ ಎಂದರೆ ಸರಿಯಲ್ಲ.

ನಿಪಿ.25 ರಲ್ಲಿರುವ ಅಡಿಕೆ ತೋಟ ವಾದಿಗೆ ಸೇರಿದ್ದಾಗಿರುತ್ತದೆ. ನಿಪಿ.25 ರಲ್ಲಿರುವ ಕಲ್ಲುಕಂಬಗಳು ಎಲೆಕ್ಟ್ರಿಕ್ ಕಂಬಗಳು ಎಂದರೆ ಸರಿ. ನಿಪಿ.6 ರಲ್ಲಿ ನನ್ನ ಮನೆ ಕಾಣಿಸುತ್ತಿಲ್ಲ, ಸದರಿ ರಸ್ತೆಯ ಎಡಬದಿ ನನ್ನ ಮನೆ ಬರುತ್ತದೆ. ನಿಪಿ.26 ರಲ್ಲಿ ಪ್ರತಿವಾದಿಗಳು ನಿರ್ಮಿಸಿರುವ ಯಾವುದೇ ಪೌಂಡೇಷನ್ ಕಾಣಿಸುತ್ತಿಲ್ಲ ಎಂದರೆ ಸರಿ. ನಿಪಿ.25 ರ ಛಾಯಾಚಿತ್ರದಲ್ಲಿಯೂ ಪ್ರತಿವಾದಿಯು ನಿರ್ಮಿಸಿರುವ ಪೌಂಡೇಷನ್ ಕಾಣಿಸುತ್ತಿಲ್ಲ ಎಂದರೆ ಸರಿ. ನಿಡಿ.1 ರ ಛಾಯಾಚಿತ್ರದಲ್ಲಿಯೂ ಯಾವುದೇ ಪೌಂಡೇಷನ್ ಕಾಣಿಸುತ್ತಿಲ್ಲ ಎಂದರೆ ಸರಿ. ನಿಡಿ.9 ರ

ಛಾಯಾಚಿತ್ರದಲ್ಲಿ ಈ ದಾವೆಗೋಸ್ಕರ ಛಾಯಾಚಿತ್ರವನ್ನು ತೆಗೆಯಲು ಕಲ್ಲುಗಳನ್ನು ಇಟ್ಟು ಪೌಂಡೇಷನ್ ನಂತೆ ಛಾಯಾಚಿತ್ರವನ್ನು ತೆಗೆದು ಸೃಷ್ಠಿಸಲಾಗಿರುತ್ತದೆ ಎಂದರೆ ಸರಿಯಲ್ಲ.

ವಾದಿಗೆ 1 ನೇ ಪ್ರತಿವಾದಿಯು ಮಾರಾಟ ಮಾಡಿರುವ ಜಮೀನಿನ ಕ್ರಯ ಪತ್ರವನ್ನು ನಾನು ನೋಡಿರುವುದಿಲ್ಲ. ಚಕ್ಕುಬಂದಿಯನ್ನು ಯಾರು ತನ್ನ ಸ್ವತ್ತನ್ನು ಮಾರಾಟ ಮಾಡುತ್ತಾರೋ ಅವರೇ ಚಕ್ಕುಬಂದಿಯನ್ನು ಹೇಳುತ್ತಾರೆ. ವಾದಿಗೆ ಜಮೀನಿನನ್ನು ಮಾರಾಟ ಮಾಡಿರುವ ಕ್ರಯ ಪತ್ರದಲ್ಲಿ ನಮೂದಿಸಿರುವ ಚಕ್ಕುಬಂದಿಯನ್ನು ನಾನು ನೋಡಿರುವುದಿಲ್ಲ. ನಿಪಿ.1ರ ಕ್ರಯ ಪತ್ರವನ್ನು ಸಾಕ್ಷಿ ನೋಡಿ ಅದರಲ್ಲಿರುವ ಪಕ್ಷಗಾರರು ವಾದಿ ಮತ್ತು ಪ್ರತಿವಾದಿಯಾಗಿರುತ್ತಾರೆ ಎಂದು ಗುರುತಿಸಿರುತ್ತಾರೆ. ನಿಪಿ.1ರ ಕ್ರಯ ಪತ್ರದ ಚಕ್ಕುಬಂದಿಯಲ್ಲಿ ಉತ್ತರಕ್ಕೆ – ಮಲ್ಲೇಶ್ವರಕ್ಕೆ ಹೋಗುವ ರಸ್ತೆ ಎಂದು ನಮೂದಿಸಲಾಗಿರುತ್ತದೆ.

ನಾನು ಪ್ರಮಾಣಪತ್ರದಲ್ಲಿ ಬರೆಸಿರುವ ಅಂಶಗಳು ನನಗೆ ಗೊತ್ತಿರುತ್ತದೆ. ನಾನು ನನ್ನ ಪ್ರಮಾಣಪತ್ರದಲ್ಲಿ ವಾದಿಗೆ ಪ್ರತಿವಾದಿಗಳು ಮಾಡಿಕೊಟ್ಟಿರುವ ಕ್ರಯ ಪತ್ರದಲ್ಲಿ ಚಕ್ಕುಬಂದಿ ತಪ್ಪಾಗಿರುತ್ತದೆ ಎಂದು ನಮೂದಿಸಿರುತ್ತೇನೆ. ನಾನು ಹಾಜರುಪಡಿಸಿರುವ ಪ್ರಮಾಣಪತ್ರಕ್ಕೆ ನಾನೇ ಮಾಹಿತಿ ನೀಡಿರುತ್ತೇನೆ. ಸಾಕ್ಷಿಯು ತನ್ನ ಪ್ರಮಾಣಪತ್ರವನ್ನು ಓದಿ ಸದರಿ ಪ್ರಮಾಣಪತ್ರದಲ್ಲಿ ವಾದಿಗೆ ಮಾರಾಟ ಮಾಡಿರುವ ಸ್ವತ್ತಿನ ಚಕ್ಕುಬಂದಿಯು ತಪ್ಪಾಗಿರುತ್ತದೆ ಎಂದು ಅದರಲ್ಲಿ ನಮೂದಿಸಿರುವುದಿಲ್ಲ ಎಂದು ನುಡಿಯುತ್ತಾರೆ. ವಾದಿಗೆ ದಾವಾ ಸ್ವತ್ತನ್ನು ಮಾರಾಟ ಮಾಡುವ ಪೂರ್ವದಲ್ಲಿಯೇ ಪ್ರತಿವಾದಿಗಳ ಪೂರ್ವಜ್ಜರಿಂದ ರಾಜ್ಯ ರಸ್ತೆ ಪ್ರಾಧಿಕಾರದವರು ಸರ್ವೆ ನಂ.58ರಲ್ಲಿರುವ ಜಮೀನಿನನ್ನು ವಶಪಡಿಸಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ರಾಜ್ಯ ರಸ್ತೆ ಪ್ರಧಿಕಾರದವರು ಸರ್ವೆ ನಂ.58ನ್ನು ವಶಪಡಿಸಿಕೊಂಡ ನಂತರ ಕಂದಾಯ ಇಲಾಖೆಯವರು ಸದರಿ ವಶಪಡಿಸಿಕೊಂಡ ವಿಸ್ತೀರ್ಣವನ್ನು ರದ್ದುಪಡಿಸಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ರಸ್ತೆಗೆ ವಶಪಡಿಸಿಕೊಂಡ ಜಮೀನಿನ ವಿಸ್ತೀರ್ಣವನ್ನು ರದ್ದುಪಡಿಸದೇ ಇದ್ದುದ್ದರಿದ ಪಹಣಿಯಲ್ಲಿ ಹಳೆ ವಿಸ್ತೀರ್ಣಯು ಮುಂದುವರೆದಿತ್ತು ಎಂದರೆ ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿ ಮತ್ತು 1ನೇ ಪ್ರತಿವಾದಿಯ ತಂದೆಯು ರಸ್ತೆಗೆ ಜಮೀನಿಗೆ ವಶಪಡಿಸಿಕೊಂಡ ನಂತರ  ಕಡಿಮೆ ವಿಸ್ತೀರ್ಣವನ್ನು ಹೊಂದಿದ್ದರು ಸಹ ಪಹಣಿಯಲ್ಲಿ ಹಳೆ ವಿಸ್ತೀರ್ಣವನ್ನೇ ಮುಂದುವರೆಸಿಕೊಂಡು ಬಂದಿದ್ದರು ಎಂದರೆ ಸರಿಯಲ್ಲ. ವಾದಿಗೆ ಮತುತ

ಕೃಷ್ಣಮೂರ್ತಿಯವರಿಗೆ ಪ್ರತಿವಾದಿಗಳು ಸರ್ವೆ ನಂ.58/1 ರಲ್ಲಿ ಇರುವ ಜಮೀನಿನನ್ನು ಮಾರಾಟ ಮಾಡಿದ ನಂತರ ಪ್ರತಿವಾದಿಗಳಿಗೆ ಸರ್ವೆ ನಂ.58/1 ಯಾವುದೇ ವಿಸ್ತೀರ್ಣದ ಜಮೀನು ಉಳಿದಿರುವುದಿಲ್ಲ ಮತ್ತು ಸ್ವಾಧೀನಾನುಭವದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು 1 ನೇ ಪ್ರತಿವಾದಿಗೆ 30 ವರ್ಷಗಳಿಂದ ಸ್ನೇಹಿತನಾಗಿರುವುದರಿಂದ ಆತನಿಗೆ ಸಹಾಯವಾಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನನ್ನು ಈ ರೀತಿ ಸಾಕ್ಷಿ ಹೇಳುವಂತೆ 1 ನೇ ಪ್ರತಿವಾದಿಯು ಕರೆದುಕೊಂಡು ಬಂದಿರುತ್ತಾರೆ.

**ಮರುವಿಚಾರಣೆಃ ಇರುವುದಿಲ್ಲ**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ

Sd/-

C/c. ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು ಕಡೂರು.